ಸಾಕ್ಷಿಯನ್ನು ದಿ: 23.01.2026 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-**

1. ಪ್ರಸ್ತುತ ದಾವೆಯನ್ನು ಅಶ್ವಿನಿ ಎನ್ನುವವರು ಸಾವಿತ್ರಮ್ಮರವರ ವಿರುದ್ಧ ಆಸ್ತಿಯಲ್ಲಿ ಭಾಗ ಕೋರಿ ಸಲ್ಲಿಸಿರುತ್ತಾರೆ. ವಾದಿಯ ತಂದೆಯ ಹೆಸರು ಬಸವರಾಜು, ಸದರಿ ಬಸವರಾಜುರವರ ತಂದೆಯ ಹೆಸರು ಸಿದ್ದರಾಮೇಗೌಡ. ಸದರಿ ಸಿದ್ದರಾಮೇಗೌಡರವರು ಮೂಲತಃ ಹೆಚ್ ಬಸಾಪುರದವರು. ಸದರಿಯವರು 10 - 15 ವರ್ಷಗಳ ಹಿಂದೆ ಕೇತುಪುರದಲ್ಲಿ ತೀರಿಕೊಂಡಿದ್ದಾರೆ. ಸದರಿ ಸಿದ್ದರಾಮೇಗೌಡರವರ ಹೆಂಡತಿಯ ಹೆಸರು ಚೆನ್ನಮ್ಮ ಹಾಗೂ ಸದರಿಯವರು ಕೇತುಪುರ ಗ್ರಾಮದವರು. ಸಿದ್ದರಾಮೇಗೌಡರವರಿಗೆ 4 ಜನ ಮಕ್ಕಳಿದ್ದಾರೆ ಅವರೆಂದರೆ ಶ್ರೀಕಂಠೇಗೌಡ, ಸರಸ್ವತಿ, ಬಸವರಾಜು ಹಾಗೂ ಪ್ರಮೀಳ. ಸದರಿ ಚೆನ್ನಮ್ಮನವರ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ.

2. ಸಿದ್ದರಾಮೇಗೌಡರವರಿಗೆ ಹೆಚ್ ಬಸಾಪುರದ ಸರ್ವೆ ನಂ.27/5 ರಲ್ಲಿ 31 ಗುಂಟೆ ಜಮೀನು, ಸರ್ವೆ ನಂ.20/10 20 ಗುಂಟೆ ಜಮೀನು, ಸರ್ವೆ ನಂ.20/5 ರಲ್ಲಿ 17 ಗುಂಟೆ ಜಮೀನು, ಸರ್ವೆ ನಂ.20/9 ರಲ್ಲಿ 3 ಗುಂಟೆ ಜಮೀನು, ಕೇತುಪುರದ ಸರ್ವೆ ನಂ.180 ರಲ್ಲಿ 20 ಗುಂಟೆ ಜಮೀನು ಹಾಗೂ 15 * 30 ಅಡಿ ಅಳತೆಯ ಒಂದು ಶೀಟಿನ ಮನೆಯಿದೆ. ಸದರಿ ಕೇತುಪುರದ ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ.

3. ವಾದಿ ಹಾಗೂ 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಕ್ಕಳು. ವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿ ಕೇತುಪುರದಲ್ಲಿ ವಾಸವಾಗಿದ್ದಾರೆ. 3 ನೇ ಪ್ರತಿವಾದಿ ಹೆಚ್ ಬಸಾಪುರದಲ್ಲಿ ವಾಸವಾಗಿದ್ದಾರೆ. ಸದರಿಯವರ ಗಂಡ ಈಗ ತೀರಿಕೊಂಡಿದ್ದಾರೆ. 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿಯ ಗಂಡದ ಕುಟುಂಬದ ಬಗ್ಗೆ ನನಗೆ ಎಲ್ಲಾ ಮಾಹಿತಿಯಿಲ್ಲ.

4. ಸಿದ್ದರಾಮೇಗೌಡರವರ ಕುಟುಂಬಕ್ಕೆ ಎಷ್ಟು ಆಸ್ತಿಯಿದೆ ಎಂದು ನನಗೆ ಮಾಹಿತಿಯಿಲ್ಲ. ಸದರಿ ಸಿದ್ದರಾಮೇಗೌಡರವರಿಗೆ ಅವರ ಹೆಂಡತಿಯ ಊರಿನಲ್ಲಿ ಜಾಗ ಕೊಟ್ಟಿದ್ದರಿಂದ ಅವರು ಕೇತುಪುರದಲ್ಲಿ ವಾಸವಾಗಿದ್ದರು. ವಾದಿಯು ಅವರ ತಂದೆಗೆ ಭಾಗ ಕೇಳಿದಾಗ ಭಾಗ

ಕೊಡದಿದ್ದರಿಂದ ಪ್ರಸ್ತುಸ ದಾವೆ ಸಲ್ಲಿಸಿದ್ದಾರೆಂದು ತಿಳಿಸಿರುತ್ತಾರೆ. ಈ ವಿಚಾರ ಹೊರತು ಪಡಿಸಿ ನನಗೆ ಈ ದಾವೆಯ ಬಗ್ಗೆ ಬೇರೆ ಮಾಹಿತಿಯಿಲ್ಲ. ಸಿದ್ದರಾಮೇಗೌಡರವರಿಗೆ ಸೇರಿದ ಕೇತುಪುರದ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ.

5. ಸಿದ್ದರಾಮೇಗೌಡ, 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿಯ ಗಂಡ ಈಗಾಗಲೆಪೀ 30 ವರ್ಷಗಳ ಹಿಂದೆ ಭಾಗ ಮಾಡಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗದಲ್ಲಿ ಸಿದ್ದರಾಮೇಗೌಡರವರ ಹೆಣ್ಣುಮಕ್ಕಳಾದ ಸರಸ್ವತಿ ಹಾಗೂ ಪ್ರಮೀಳರವರಿಗೂ ಭಾಗ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ವಾದಿ ಹಾಗೂ ಪ್ರತಿವಾದಿಯರ ನಡುವೆ ಯಾವಾಗ ಹಾಗೂ ಎಲ್ಲಿಪಂಚಾಯಿತಿ ನಡೆದಿರುತ್ತದೆಂದು ನನಗೆ ಗೊತ್ತಿಲ್ಲ.

6. ಸಿದ್ದರಾಮೇಗೌಡರವರ ಹೆಂಡತಿ ನಮ್ಮ ಸಂಬಂಧಿಕರು ಎಂದರೆ ಸರಿ. ಸಿದ್ದರಾಮೇಗೌಡರ ಕುಟುಂಬದ ಪಾಲು ವಿಭಾಗದಲ್ಲಿ 1 ನೇ ಪ್ರತಿವಾದಿಗೆ ಕೇತುಪುರದ ಆಸ್ತಿಗಳು ಶ್ರೀಕಂಠೇಗೌಡರವರಿಗೆ ಹೆಚ್ ಬಸಾಪುರದ ಆಸ್ತಿಗಳು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 08.02.1993 ರಂದು 1 ನೇ ಪ್ರತಿವಾದಿಯ ಭಾಗಕ್ಕೆ ಬಂದ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಸದರಿ ಪತ್ರಕ್ಕೆ 1 ನೇ ಪ್ರತಿವಾದಿ, ಶ್ರೀಕಂಠೇಗೌಡ ಹಾಗೂ ಸಿದ್ದರಾಮೇಗೌಡರವರು ಸಹಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದರಂತೆ 3 ನೇ ಪ್ರತಿವಾದಿಗೆ ಹೆಸರಿಗೆ ದಾವಾ ಷೆಡ್ಯೂಲ್ 1 ನೇ ಆಸ್ತಿಯ ಖಾತೆ ಬದಲಾವಣೆಯಾಗಿರುತ್ತದೆ ಹಾಗೂ ಸದರಿಯವರು ಮನೆ ಕಟ್ಟಿಕೊಂಡು ಸ್ವಾಧೀನದಲ್ಲಿದ್ದಾರೆಂದರೆ ಸರಿ. ಸದರಿ ಆಸ್ತಿಯಲ್ಲಿ ಮನೆ ಕಟ್ಟಲು ವಾಜಪೇಯಿ ವಸತಿ ಯೋಜನೆಯಡಿಯಲ್ಲಿ 3 ನೇ ಪ್ರತಿವಾದಿಗೆ ಸಹಾಯ ನಿಧಿ ಕೊಟ್ಟಿದ್ದಾರೆಂದರೆ ಸರಿಯಲ್ಲ.

7. 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಕೇತುಪುರದ ಆಸ್ತಿಯಲ್ಲಿ ಸದರಿಯವರು ಕುಟುಂಬದವರೊಂದಿಗೆ ವಾಸವಾಗಿದ್ದಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿಯವರಿಗೆ ಚೆನ್ನಮ್ಮರವರ ಕುಟುಂಬದವರು ಆಸ್ತಿ ಕೊಟ್ಟಿದ್ದಾರೆಂದು ನುಡಿಯುತ್ತಾರೆ. ಸದರಿ ಆಸ್ತಿಯು 1 ನೇ ಪ್ರತಿವಾದಿಗೆ ಸಿದ್ದರಾಮೇಗೌಡರವರಿಗೆ ಬಂದಿದೆ ಎಂದರೆ ಸರಿ. 1 ನೇ ಪ್ರತಿವಾದಿಯ ಹಿಸ್ಸಗೆ ಬಂದ ಆಸ್ತಿಯನ್ನು 3 ನೇ ಪ್ರತಿವಾದಿ ಮಾರಾಟ ಮಾಡಿರುವುದು

ಗೊತ್ತಿದ್ದರು ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

8.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ